ಒಳ ಬರುತ್ತಿದ್ದ ಆ ಗಂಡ ಈಗ ಇದ್ದದ್ದೂ ನಿರಾಳವಾಗಿ. ಅಪ್ಪನ ಹದಿನಾಲ್ಕರ ಕಾರ್ಯ ಮುಗಿಸಿದ ಮಾರನೇ ದಿನವೇ ಟವೆಲು ಹೆಗಲಿಗೇರಿತ್ತು. ಸವಾರಿ ಮುಂದಿನ ಬಾಗಿಲಿನಿಂದಲೇ ಹೊರಟಿತ್ತು. ಅಮ್ಮ ಸತ್ತಾಗಲಂತೂ ಎಲ್ಲಿತ್ತೋ ಸವಾರಿ. ಕಾಗೆ ವರ್ತಮಾನ ಕೊಟ್ಟವರ ಹಾಗೆ ಬಂದಿದ್ದರು ಮತ್ತು ಕಾರ್ಯ ಮುಗಿಸಿ ಪುನಃ ತಮ್ಮ ದಾರಿ ಹಿಡಿದಿದ್ದರು. ಮನೆಯಲ್ಲಿ ಚಿಕ್ಕ ಮಕ್ಕಳೊಂದಿಗೆ ಅಷ್ಟೇನೂ ವಯಸ್ಸಾಗದ ಹೆಂಡತಿ ಹೇಗೆ ನಿಭಾಯಿಸುತ್ತಾಳೆ, ಅವಳಿಗೆ ಸಹಾಯಕ್ಕೆ ಯಾರಾದರೂ ಇದ್ದಾರೆಯೇ... ಊಂ... ಹೂಂ ಯಾವ ಚಿಂತೆಯೂ ಇಲ್ಲ. ಅತ್ತೆಯ ಕೈಕೆಳಗೆ ತರಬೇತಾದ ವಾಗ್ದೇವಿ ಅದು ಹೇಗೋ ನಿಭಾಯಿಸುತ್ತಿದ್ದಳು. ಮೇಲಾಗಿ ದಿನಬೆಳಗಾದರೆ ಚಿಂತೆ ಮಾಡಬೇಕಾಗಿದ್ದ ಗದ್ದೆಗಳೆಲ್ಲ ಹೋಗಿದ್ದುವು. ಬರೀ ತೆಂಗಿನ ತೋಟ ನೋಡಿಕೊಂಡರೆ ಸಾಕು. ಆದರೆ ಅದಕ್ಕೂ ಕೆಲಸವಿದೆಯಲ್ಲ. ಕಾಲ ಕಾಲಕ್ಕೆ ಗೊಬ್ಬರ ಹಾಕಿ ಕಟ್ಟೆ ಕಡಿದು ಸರಿಮಾಡದಿದ್ದರೆ ಫಲ ಬಿಡುತ್ತದೆಯೇ. ಜತೆಗೆ ಮಳೆಗಾಲ ಮುಗಿದು ಚಳಿಗಾಲ ಆರಂಭವಾಗುತ್ತದೆ ಎನ್ನುವಾಗ ಮರದ ತುದಿಯಲ್ಲಿನ ಕಸವನ್ನೆಲ್ಲ ತೆಗೆದು ಚೊಕ್ಕ ಮಾಡಿಸಬೇಕು. ಅಪರೂಪಕ್ಕೊಮ್ಮೆ ಮದ್ದು ಹೊಡೆಸಬೇಕು. ಏನಿಲ್ಲವೆಂದರೂ ವರ್ಷಕ್ಕೆ ಹನ್ನೆರಡು ಬಾರಿ ಕಾಯಿ ಕೀಳಿಸಬೇಕು. ಅವುಗಳಲ್ಲಿ ಎಣ್ಣೆಗೆ ಯಾವುವು, ಮಾರಾಟ ಮಾಡಲು ಯಾವುವು ಎನ್ನುವುದನ್ನು ಬೇರ್ಪಡಿಸಬೇಕು. ಎಲ್ಲದಕ್ಕೂ ಕೆಲಸದವರನ್ನೇ ಅವಲಂಬಿಸಬೇಕು. ಮಕ್ಕಳಿದ್ದಾರೆ ಇಬ್ಬರು. ಈಗಷ್ಟೇ ಪಕ್ಕದಲ್ಲಿಯೇ ಇದ್ದ ಎಲಿಮೆಂಟರಿ ಶಾಲೆಯನ್ನು ಮುಗಿಸಿ ಮೂರು ಮೈಲಿ ದೂರದ ಹೈಸ್ಕೂಲಿಗೆ ನಡೆದುಕೊಂಡೇ ಹೋಗಿ ಬರುತ್ತಿದ್ದಾರೆ. ಶಾಲೆಗೆ ಹೋಗಿ ಬಂದೇ ಸುಸ್ತಾಗುತ್ತಿದ್ದ ಮಕ್ಕಳಿಂದ ಕೆಲಸ ಮಾಡಿಸಲು ಅವಳಿಗೆ ಮನಸ್ಸು ಬರುವುದಿಲ್ಲ. ತಾನೇ ಕೆಲಸದವರನ್ನು ಕಟ್ಟಿಕೊಂಡು ಏಗುತ್ತಾಳೆ. ಅಷ್ಟೋ ಇಷ್ಟೋ ನಿಯತ್ತಿದ್ದವರು ಈಕೆ ಕರೆದಾಕ್ಷಣ ಕೆಲಸಕ್ಕೆ ಬರುತ್ತಾರೆ. ಹಿಂದಿನ ಋಣ 'ಇಲ್ಲ' ಎನ್ನಲು ಬಿಡಲಾರದು.

ಹಿಂದಿನ ದಿನಗಳಲ್ಲಿ ಮನೆ ಬಾಗಿಲಿನಲ್ಲಿ ಕೈ ಕಟ್ಟಿ ನಿಂತುಕೊಳ್ಳುತ್ತಿದ್ದ ಹೆಚ್ಚಿನ ಮಂದಿ ಈಗ ಗದ್ದೆಗಳೆಲ್ಲ ಅವರದ್ದೇ ಆದ ಮೇಲೆ ಈಕೆಯ ಕಣ್ಣು ತಪ್ಪಿಸಿ ತಿರುಗುತ್ತಾರೆ. ಆಕೆ ಎಲ್ಲಿಯಾದರೂ ಕರೆದರೆ ನೇರವಾಗಿ ಇಲ್ಲವೆಂದು ಹೇಳಲು ದಾಕ್ಷಿಣ್ಯ. ಹೆಣ್ಣು ಹೆಂಗಸೊಬ್ಬಳು ಏಕಾಂಗಿಯಾಗಿ ದುಡಿಯುತ್ತಿರುವಾಗ ಇಲ್ಲವೆಂದು ಹೇಳುವುದು ಹೇಗೆ. ಅಂತಹ ಕಷ್ಟದಲ್ಲೂ ವಾಗ್ದೇವಿ ಏಗುತ್ತಿದ್ದಳು. ಕಷ್ಟವಾಗುತ್ತಿದ್ದುದು ದಿನಾ ನೂರೈವತ್ತು ಮರಗಳ ಬುಡಕ್ಕೆ ನೀರು ಹಾಯಿಸುವಾಗ. ಗಂಟೆ ಎರಡು ಗಂಟೆಯ ಹೊತ್ತು ಅಲ್ಲಿಯೇ ಇರಬೇಕು. ಮಾವ ಇರುವಾಗಲೇ ನೀರಿನ ಮೋಟಾರ್ ಒಂದನ್ನು ಹಾಕಿಸುವ ಒಳ್ಳೆ ಕೆಲಸ ಮಾಡಿದ್ದರು. ಇಲ್ಲವೆಂದಿದ್ದರೆ ಈ ಜನರನ್ನು ನಂಬಿ ತೋಟ ಮಾಡುವ ಹಾಗಿದೆಯೇ. ಯದ್ವಾತದ್ವಾ ಮಜೂರಿ ಕೇಳಿಯಾರು. ಮಜೂರಿ ಹೋಗಲಿ. ಏನಾದರೂ ಮಾಡಿ ಕೊಡಬಹುದು. ಆದರೆ ಸಮಯಕ್ಕೆ ಸರಿಯಾಗಿ ಬರಬೇಕಲ್ಲ. ಎರಡು ದಿನ ನೀರಿಲ್ಲವೆಂದರೆ ಮೂರನೇ ದಿನವೆ ಪಿಳ್ಳೆ ಉದುರಲು ಸುರುವಾಗುತ್ತದೆ.

ಹಾಗೆ ಸಂಭಾಳಿಸಿಕೊಳ್ಳುತ್ತಿದ್ದವಳಿಗೆ ತೀರ ತೊಂದರೆಯಾಗುತ್ತಿದ್ದುದು ತಿಂಗಳಿಗೊಮ್ಮೆ ಕಾಯಿಗಳನ್ನು ಕೀಳಿಸುವಾಗ. ಅದಕ್ಕೆ ಕೆಲಸದವರನ್ನೇ ಅವಲಂಬಿಸಬೇಕಾಗಿತ್ತು. ಅವರು ಕೇಳಿದಷ್ಟು ಮಜೂರಿ ಕೊಟ್ಟೂ ಅವರ ಮರ್ಜಿ ಕಾಯಬೇಕು. ದಿನಕ್ಕೆ ಹತ್ತೇ ಮರ ಹತ್ತಿ ಇಳಿಯುತ್ತೇನೆಂದರೆ ಅದಕ್ಕೂ ಸೈ ಎನ್ನಬೇಕು. ಆ ಲೆಕ್ಕದಲ್ಲಿ ತಿಂಗಳಿಗೆ ಹದಿನೈದು ದಿನ ಅದೇ ಕೆಲಸ. ಮಧ್ಯ ಮಧ್ಯ ಏನಾದರೂ ಸಬೂಬು ಹೇಳಿ ಅವರು ಬರದಿದ್ದರೆ ತಿಂಗಳಿಡೀ ಎಳೆದರೂ ಎಳೆದೀತೆ. ಮತ್ತೆ ಪುನಃ ಆರಂಭ. ಕೆಲಸ ಮುಗಿಯುವ ಮಾತೇ ಇಲ್ಲ. ಮುಗಿದು ರೆಸ್ಟ್ ತೆಗೆದುಕೊಳ್ಳಬೇಕೆಂದು ಅಲ್ಲ. ಅದಕ್ಕೆ